
# ಅಧ್ಯಾಯ 6

ಶ್ರೀ ಗಣೇಶಾಯ ನಮಃ    ಸದ್ಗುರು ಸಿದ್ಧಾರೂಢ ನಮಃ




ಛಂದ :-ವಿರತಿಯನು ಸುವಿವೇಕವನು ಬಹುಜನದೊಳು ಸಾಧಿಸಿದನು ನರನು ತನ್ನ ಸ್ವರೂಪಕಾಣದೆ ವ್ಯರ್ಥ ಹಂಬಲಿಸಿರುವನು ಗುರುಪ್ರಸಾದವನಾವ ಜನ್ಮದೊಳವನೆ ಪಡೆದನು ಪುಣ್ಯದಿ ವಿರತಿಯಾದಿಗಳಾಗಳೆ ಫಲಿಸಿದವು ನರನಿಗೆ ತವಕದಿ..

ಶ್ರೀ ಸಿದ್ಧಾರೂಢ ಸದ್ಗುರುನಾಥರು, ತಾವು ಸ್ವತಃ ಸಿದ್ಧವಾದ ಬ್ರಹ್ಮ ತತ್ವವಾಗಿರುವದರಿಂದ, ಅವರಿಗೆ ಉಪನಿಷದರ್ಥವು ಕರತಲಾಮಲಕದಂತೆ ನಿಶ್ಚಯವಾಗಿರುವುದು.

ಅದ್ವೈತಭಾವದಿಂದ ಜಗವನ್ನು ನೋಡುತ್ತಿದ್ದರೂ, ಮುಮುಕ್ಷುವಿಗೆ ಉಪದೇಶ ಮಾಡುವರು, ಐಕ್ಯಭಾವದಿಂದ ಇರುವರಾದರೂ ಶರಣಾರ್ಥಿಯಾದವನಿಗೆ ಪಾಲಿಸುವರು.ತಿರಕರಾನ ದೇವಾಲಯದಲ್ಲಿ ಸಿದ್ಧಗುರುಗಳು ಕೆಲವು ದಿನ ಇದ್ದು, ನಿತ್ಯ ಅಲ್ಲಿಗೆ ಬರುವ ಜಿಜ್ಞಾಸು ಜನರ ಶಂಕೆಗಳನ್ನು ಸಮಾಧಾನ ಮಾಡುತ್ತಿದ್ದರು. ಇವರ ವಾರ್ತೆಯನ್ನು ಕೇಳಿ, ಒಬ್ಬ ಶಾಸ್ತ್ರಿಯು ಅಲ್ಲಿಗೆ ಬಂದು ಸದ್ಗುರುಗಳನ್ನು ಕುರಿತು, "ಸ್ವಾಮಿ, ಮುಮುಕ್ಷುತ್ವವು ಧರ್ಮವೋ ಅಥವಾ ಗುಣವೋ ಇದನ್ನು ನಿರೂಪಿಸಿರಿ ಎಂದು ಪ್ರಶ್ನೆ ಮಾಡಲು ಮಹಾತ್ಮರು "ಮುಮುಕ್ಷತ್ವವು ಜೀವನ ಧರ್ಮವಲ್ಲ, ಯಾಕೆಂದರೆ ಅದು ಜೀವನ ನಿತ್ಯ ಸ್ಥಿತಿಯಲ್ಲ; ಹ್ಯಾಗೆ ಅಗ್ನಿಯ ಧರ್ಮ ಉಷ್ಣತೆಯೋಹಾಗೇ ಇರುವದಿಲ್ಲ. ಮುಮುಕ್ಷುತ್ವವು ಗುಣವೆಂದರೆ, ಮುಮುಕ್ಷುತೆ ಇದ್ದವನು ಅಭ್ಯಾಸದಲ್ಲಿ

ಪ್ರವರ್ತನಾಗಲಿಕ್ಕಿಲ್ಲ. ಆದ್ದರಿಂದ ಅಭ್ಯಾಸ ಸಂಜನಿತ ಭಾವವೇ ಮುಮುಕ್ಷುತ್ವವೆನಬೇಕು. ಎಲ್ಲಿ ತನಕ ಈ ಭಾವವಿರುವದು ಅಂದರೆ, ಮುಮುಕ್ಷುವು ಗುರುವಿಗೆ ಶರಣುಹೋಗಿ ಮಹಾವಾಕ್ಯ ಶ್ರವಣ ಮಾಡುವವರೆಗೆ ಅದು ಇರುವುದು. ಆ ಸಮಯದಲ್ಲಿ ಮುಮುಕ್ಷುದೆಸೆಯವೃತ್ತಿ ಅಹಂಬ್ರಹ್ಮಾಸ್ಮಿ ಭಾವದಿಂದ ಚಿತ್ತದಲ್ಲಿದ್ದು ಜ್ಞಾನಾಕಾರದಿಂದ ಅದು ಪರಿಣಮಿಸುತ್ತದೆ. ಆಗ್ಗೆ ಅದಕ್ಕೆ ಅಪರೋಕ್ಷವೆನ್ನುತ್ತಾರೆ. ಈ ಭಾವವು ಸುಸ್ಥಿತವಾಯಿತೆಂದರೆ, ಇದರಿಂದ ದೇಹತಾನೆಂಬ ಭಾವವು ನಾಶವಾಗುವದು ಮತ್ತು ಸಾಗರದಲ್ಲಿ ಜಲಬಿಂದು ಕೂಡಿ ಹೋದಂತೆ ಜೀವನು ಬ್ರಹ್ಮದಲ್ಲಿ ಸಮರಸ ಹೊಂದವನು" ಎಂದು ಸಿದ್ಧರು ಅಂದದ್ದು ಕೇಳಿ, ಶಾಸ್ತ್ರಿಯು ಸಂತೋಷಪಟ್ಟು ಹೊರಟುಹೋದನು. ಅನಂತರ ಪಿಚ್ಚಂಡಯ್ಯನೆಂಬ ಒಬ್ಬ ಶಾಸ್ತ್ರಿಯು ತ್ವರೆಯಿಂದ ಸಿದ್ಧರ ಕಡೆಗೆ ಬಂದು ವಿಚಾರಿಸುತ್ತಾನಲ್ಲ, "ಪೃಥ್ವಿಯು ಈ ಭೌತಿಕಗಳಿಗೆ ಆಧಾರವು, ಪೃಥ್ವಿಗೆ ಆಧಾರವ್ಯಾವದು?" ಸಿದ್ಧರು ಪ್ರತ್ಯುತ್ತರ ಕೊಟ್ಟಿದ್ದೇನೆಂದರೆ - ಪೃಥ್ವಿಯು ಜಲದ ಮೇಲೆ ಇರುವದು,

“ತದಾಪ್ಯ ಪೃಥ್ವಿ" ಎಂದು ಶ್ರುತಿಯಿರುವದು. ಜಲಕ್ಕೆ ಆಧಾರ ಅಗ್ನಿಯು, "ಅಗ್ನೇರಾಪಃ” ಎಂದು ಶ್ರುತಿ ಪ್ರಮಾಣವು ಅಗ್ನಿಯು ವಾಯುವಿನಿಂದ ಉತ್ಪನ್ನವಾದದ್ದು; “ವಾಯೋರಗ್ನೀ?” ಎಂದು ಶ್ರುತಿ ಹೇಳುವುದು. ಈ ವಾಯುವಿಗೆ ಆಕಾಶವೇ ಆಧಾರವಿರುವದು "ಆಕಾಶದ್ವಾಯುಃ " ಎಂದು ವೇದಗಳ ಪ್ರಮಾಣವಿದೆ. ಯಾಕೆಂದರೆ ವಾಯುವು ಆಕಾಶದ ಶ್ವಾಸವೆಂದು ಜ್ಞಾತ ಜನರು ಹೇಳುತ್ತಾರೆ. ಆ ಆಕಾಶಕ್ಕೆ ಅಧಿಷ್ಠಾನವಾಗಿ ಅಕ್ಷರ ಪರಮಾತ್ಮನಿರುವನು, “ತಸ್ಮಾದ್ವಾ ಏತ ಸ್ಮಾದಾತ್ಮನಃ ಆಕಾಶಃ ಸಂಭೂತಃ" ಎಂದು ಶ್ರುತಿ ವಚನವಿರುವದು, ಇದನ್ನು ಕೇಳಿ ಶಾಸ್ತ್ರಿಯು ಬಹು ಆನಂದಪಟ್ಟನು ಮತ್ತು ತನ್ನ ಮನೆಗೆ ಹೋಗಿ, ಸಿದ್ಧರ ದೆಸೆಯಿಂದ ಮೃಷ್ಟಾನ್ನವನ್ನು ತಂದು ಅವರ ಮುಂದಿಟ್ಟು ಸೇವಿಬೇಕೆಂದು ಪ್ರಾರ್ಥಿಸಿದನು. ಸಿದ್ಧನಾಥರು ಅದನ್ನು ಮಿತವಾಗಿ ಸೇವಿಸಿದರು. ಆ ಮೇಲೆ ಒಬ್ಬ ಪುರುಷನು ಬಂದು ಸಿದ್ಧರನ್ನು ಕುರಿತು, "ಮನಸ್ಸು ಯಾವಾಗಲೂ ಬಹು ಚಂಚಲವಾಗಿರುತ್ತದೆ. ಇದರ ಕಾರಣವನ್ನು ಸವಿಸ್ತಾರವಾಗಿ

ನಿರೂಪಿಸಬೇಕು". ಎಂದು ಕೇಳಲು, ಸಿದ್ಧಗುರುಗಳಂದದ್ದು, "ಪ್ರಥಮತಃ ವಾಯು ಮತ್ತು ಎರಡನೆಯದಾಗಿ ರಜೋಗುಣ, ಇವೆರಡೂ ಮನಸ್ಸನ ಚಂಚಲತ್ವಕ್ಕೆ ಕಾರಣವಾಗಿವೆ. ಯಾಕೆಂದರೆ ವಾಯುವಿನ ಅರ್ಧಭಾಗದಿಂದ ಮನಸ್ಸು ಉತ್ಪನ್ನವಾಯಿತು. ಅದರಿಂದಲೇ ಮನಸ್ಸಿಗೆ ವಾಯುವಿನ ಸ್ವಭಾವವಾದ ಚಂಚಲತ್ವವು ಪ್ರಾಪ್ತವಾಯಿತು ಮತ್ತು ಅದು ಕ್ಷಣಹೊತ್ತು ತಡೆಯದೆ ವಿಷಯಗಳೊಳಗೆ ಹರಿದಾಡುತ್ತಿರುವದು. ರಜೋಗುಣದಿಂದ ಮನಸ್ಸಿನೊಳಗೆ ವಿಕಲ್ಪಗಳು ಉಂಟಾಗುತ್ತವೆ. ಇವೆರಡರ ಪೈಕಿ ಪ್ರಥಮ ವಿಪತ್ತನ್ನು ಪಾತಂಜಲಿ ಯೋಗಕ್ಕನುಸಾರವಾಗಿ ಪ್ರಾಣಾಯಾಮವನ್ನು ಮಾಡಿ ಕಳಕೊಳ್ಳಬೇಕು. ಮನಸ್ಸಿನ ಅನಿರ್ಧಾರ ರೂಪ ವಿಕಲ್ಪ ದ್ವಾರಾ ಬಾಧೆಯುಂಟಾಗುವ ಪಕ್ಷದಲ್ಲಿ, ಆ ಮನಸ್ಸನ್ನು ದೃಗ್ದೃಶ್ಯ, ವಿವೇಕದಿಂದ ಆವರಿಸಿಕೊಂಡು, ಆತ್ಮಾನಾತ್ಮ ವಿಚಾರಕ್ಕೆ ಹಚ್ಚಬೇಕು. ಆದರೆ ಆ ವಿವೇಕವನ್ನು ಸದ್ಗುರುಬೋಧ ಮತ್ತು ತಚ್ಚಿಂತನದಿಂದ ಪ್ರಾಪ್ತಿ ಮಾಡಿಕೊಳ್ಳಬೇಕು". ಈ ಪ್ರಕಾರದ ಸದ್ಗುರುನಾಥರ

ವಚನವನ್ನು ಕೇಳಿ, ಮಲಯನಾಥನೆಂಬ ಆ ಬ್ರಾಹ್ಮಣನು ಆನಂದದಿಂದ, "ಹಾಗಾದರೆ ಸ್ವಾಮಿ, ನನ್ನ ಸುದೈವದಿಂದ ನನಗೆ ಇಂದೇ ಸದ್ಗುರುಗಳು ದೊರೆತರು. ವಿವೇಕವನ್ನು ಈಗಲೇ ವಿಚಾರಿಸಿ ತಿಳಿದುಕೊಳ್ಳುವೇನು. ಆದ್ದರಿಂದ ದೃಶ್ಯ ಯಾವದು? ದೃಕ್ ಯಾವದು? ಎಂಬುದನ್ನು ನನಗೆ ನಿರೂಪಿಸಬೇಕೆಂದು ಪ್ರಾರ್ಥಿಸುವೇನು "ಎಂದು ನುಡಿದನು. ಅದಕ್ಕೆ ಸದ್ಗುರುಗಳು ಉತ್ತರ ಕೊಡುತ್ತಾರೆ, "ಕೂಟಸ್ಥನ ಚಿತ್ಪ್ರತಿ ಬಿಂಬಯುಕ್ತ ಅಂತಃಕರಣ ವೃತ್ತಿಯು ಇಂದ್ರಿಯಕರಣದ್ವಾರಾ ಘಟಾದಿ ವಸ್ತುಗಳನ್ನು ನೋಡುವಾಗ, ಆ ವಸ್ತುಗಳು ದೃಶ್ಯ ಮತ್ತು ಇಂದ್ರಿಯಗಳ ದೋಷಗಳನ್ನು ಮನಸ್ಸು ಕಾಣುತ್ತಿರುವಾಗ, ಇಂದ್ರಿಯಗಳು ದೃಶ್ಯವಾಗಿ ಮನಸ್ಸು ದೃಕ್ಕೆನಿಸುವದು. ಮನಸ್ಸಿನ ಸಂಶಯಾದಿ ದೋಷಗಳನ್ನು.ವಿಚಾರಿಸುವಾಗ ಚಿದಾಭಾಸನೇ ದೃಕ್ ಆಗುತ್ತಾನೆ. ಈ ಚಿದಾಭಸನು ಬುದ್ಧಿಯ ಆಧೀನನಿರುವವನು ಮತ್ತು ಬುದ್ಧಿಯು ಸುಷ್ತಿಯಲ್ಲಿ ಲಯ ಹೊಂದುವದು. ಆಗ ಚಿದಾಭಾಸನ ಪರಮಾರ್ಥರೂಪವಾದ ಕೂಟಸ್ಥಾತ್ಮನೇ ದೃಕ್

ಇರುವನು. ಈತನೇ ಬ್ರಹ್ಮ ರೂಪವಾಗಿದ್ದು ಇವನಿಗೆ ಬೇರೆ ದೃಕ್ ಇಲ್ಲ. ಈ ದೃಕ್ಕಿಗೆ ಅಂತರ ಬಾಹ್ಯವೆಂಬ ಭೇದಗಳು ಸರ್ವಥಾ ಇರುವದಿಲ್ಲ.ಆತನು ಅಸಹಾಯ ಕುಟಸ್ಥನಾಗಿದ್ದು ಸರ್ವ ಪ್ರಪಂಚವನ್ನು ಒಮ್ಮೆಗೇ ನೋಡುತ್ತಿರುವನು. ಯಾವ ಈತನಿಗೆ ಚಿನ್ಮಾತ್ರಪರಬ್ರಹ್ಮವೆಂದು ಹೇಳುತ್ತಾರೆ, ಆತನೇ ನೀನು ನಿತ್ಯದಲ್ಲಿರುವಿ. ನಿನಗೆ ಬೇರೆಯಾದ ದೃಕ್ ಇಲ್ಲವೇ ಇಲ್ಲ. ಇದನ್ನು ತಿಳಿದು, ನೀನು ಧನ್ಯನಾಗುವಿ". ಸದ್ಗುರು ಮುಖದಿಂದ ಈ ವಚನವನ್ನು ಕೇಳಿದ ಆ ಮಲಯನಾಥನೆಂಬ ಬ್ರಾಹ್ಮಣನು, "ನಾನು ಧನ್ಯನು, ಧನ್ಯನು, ನಿಮ್ಮ ಕೃಪೆಯಿಂದ ನಾನು ಕೃತಾರ್ಥನಾದೆನು. ನನ್ನ ಪಿತೃಗಳೂ ಇವತ್ತು ಧನ್ಯರಾದರು", ಎಂದು ಸದ್ಗುರುಗಳಿಗೆ ನಮಸ್ಕರಿಸಿ, ಆತನು ತನ್ನ ಗೃಹಕ್ಕೆ ತೆರಳಿದರು.

ಐದನೇ ದಿವಸ ರಾಮಭಟ್ಟನೆಂಬ ಶಾಸ್ತ್ರಿಯು ಬಂದು ಸಿದ್ಧ ಸದ್ಗುರುಗಳನ್ನು ಕುರಿತು, "ಹೇ ಸ್ವಾಮಿಗಳೇ, ಯಾವ ಪ್ರಕಾಶದಿಂದ ಈ ಪ್ರಪಂಚವು ಭಾಸಿಸಲ್ಪಡುವದು ?" ಎಂದು ಕೇಳಲು, ಸಿದ್ಧರು ಅಂದದ್ದೇನೆಂದರೆ, "ಹಗಲು ಹೊತ್ತು

ಸೂರ್ಯನು , ರಾತ್ರಿ ವೇಳೆ ದೀಪ ನಕ್ಷತ್ರ, ಚಂದ್ರ ಇತ್ಯಾದಿಗಳಿಂದ ಈ ಪ್ರಪಂಚವು ಬೆಳಗಲ್ಪಡುವದು. ಆದರೆ ಇವುಗಳು ಯಾತರಿಂದ ಬೆಳಗಲ್ಪಡುವವು ?" ಎಂದು ಕೇಳಲು, ರಾಮಭಟ್ಟನು, ನೇತ್ರದಿಂದ ಎಂದನ್ನಲು, ಸಿದ್ಧರು, ಕಣ್ಣು ಮುಚ್ಚಿದಾಗಯಾತರ ಪ್ರಕಾಶವೆಂದು ಕೇಳಲು, ಬುದ್ದಿಯ ಪ್ರಕಾಶವೆಂದು ರಾಮಭಟ್ಟನು ಉತ್ತರ ಕೊಟ್ಟನು . ಆಗ ಸಿದ್ಧರು ಬುದ್ಧಿಯು ಯಾವ ವಸ್ತುವಿನಿಂದ ಪ್ರಕಾಶಿಸಲ್ಪಡುತ್ತದೆಂದರೆ, ಅಹಂಕಾರಯುಕ್ತ ಚಿದಾಭಾಸನಿಂದ; ಆ ಚಿದಾಭಾಸನು ಸಮಾಧಿಯಲ್ಲಿ ಲಯವಾದಾಗ್ಗೆ ಆತ್ಮನೊಬ್ಬನೇ ಉಳಿಯುವನು. ಯಾವ ಆತ್ಮನು ಸ್ವೇತರ ಜ್ಞಪ್ತಿಶೂನ್ಯ ಸ್ವಯಂಪ್ರಕಾಶ ಪರಮಾತ್ಮನೇ ಇರುವನೋ ಅವನೇ ನೀನಿರುವಿ", ಎಂದು ಅಂದದ್ದು ಕೇಳಿ ರಾಮಭಟ್ಟನು ನಿಜಾತ್ಮ ಸ್ಥಿತಿಯನ್ನು  ಹೊಂದಿ, ಎದ್ದು ಸಿದ್ಧಗುರುಗಳ ಚರಣಗಳಿಗೆರಗಿದನು. ಆಮೇಲೆ ಎದ್ದು "ಕೃತಾರ್ಥೋऽಹಂ, ಕೃತಾರ್ಥೋऽಹಂ" ಎಂದನ್ನುತ್ತ ಅತ್ಯಾನಂದದಿಂದ ತನ್ನ ಮನೆಗೆ ಹೋದನು.

ಆರನೇ ದಿವಸ ಸಿದ್ಧಾರೂಢರ ಭೇಟಿಗೆ ಚಿದಂಬರ ದೀಕ್ಷಿತನು ಬಂದು, ತತ್ವಮಸಿ ಮಹಾಕಾವ್ಯದ ಅರ್ಥವೇನೆಂದು ಕೇಳಿದನು. ಸಿದ್ದರು, "ಅದರರ್ಥ 'ನೀನು ಬ್ರಹ್ಮನಿದ್ದಿ' ಎಂದು ಆಗುತ್ತದೆ' ಎನ್ನಲು, ದೀಕ್ಷಿತನು, “ಆ ವಾಕ್ಯದ ಅರ್ಥ ಹಾಗಲ್ಲ. ಸತ್ಯವಾದ ಅರ್ಥ ನಾನು ಹೇಳುವೆನು ಕೇಳು. ಕರ್ಮ ಮಾಡುವವನ ಆತ್ಮನು ದೇವಲೋಕಕ್ಕೆ ಹೋಗಿ ಅಲ್ಲಿ ದೇವತ್ವವನ್ನು ಹೊಂದಿ ಶುದ್ಧನಾಗುವನು ಎಂಬಂತೆ ಅದು ಸ್ತುತಿಪರವಿರುವದು", ಎಂದು ನುಡಿಯಲು, ಅವಧೂತರು, “ಮಹಾವಾಕ್ಯವು ಜ್ಞಾನಕಾಂಡಪರವಿರುವದು, ಅದು ಯಾವರೀತಿಯಿಂದಲೂ ಸ್ತುತಿಪರವಾಗಲಾರದು; ಯಾಕೆಂದರೆ ಯಾವ ವಸ್ತುವಿಗೆ ದ್ರವ್ಯ, ಗುಣ, ಕರ್ಮ, ಜಾತಿ, ಧರ್ಮ, ವರ್ಣ, ಆಶ್ರಮ ಇತ್ಯಾದಿಗಳು ಸಲ್ಲುವವೋ ಅದೇ ಸ್ತುತ್ಯವಾಗುವದು. ಆದರೆ ಯಾವ ನಿರಾಲಂಬ ನಿರ್ವಿಶೇಷ ಪರಿಪೂರ್ಣವಾದ ಆತ್ಮನಿರುವನೋ, ಅಂಥವರಿಗೆ ಇದು ಸ್ತುತಿಪರವಾಗದೆ, ಮುಮುಕ್ಷುಗಳಿಗೆ ಉಪದೇಶಪರವಾಗಿರುವದು. ಮಹಾವಾಕ್ಯವು ಸ್ತುತಿಪರವಾಗಿದ್ದು ಕರ್ಮ ಕರ್ತವ್ಯವೇ

ಮುಖ್ಯವಾಗಿದ್ದರೆ ಜ್ಞಾನಿಯು ಅಧಿಕವಾಗಿ ಕರ್ಮದಲ್ಲಿ ತತ್ಪರನಾಗಬೇಕು, ಹೀಗೆ ಎಲ್ಲಿಯೂ ಕಾಣಿಸದೆ, ಜ್ಞಾನಿಯೂ ಕರ್ಮ ತ್ಯಜಿಸಿದವನಿರುತ್ತಾನೆ", ಅನ್ನಲು, ದೀಕ್ಷಿತನು "ಹಾಗಾದರೆ ಮಹಾವಾಕ್ಯವಾ ಉಪಾಸನಪರವಹುದು" ಅದನು. ಆಗ ಸಿದ್ಧರು "ಉಪಾಸನವೆಂದರೆ ಪ್ರಥಕ್ " ಉಪಾಸನ ಮತ್ತು ಅಹಂಗ್ರಹವೆಂದು ಎರಡು ಪ್ರಕಾರ ಇರುವಾಗ, ಅದು ಯಾವ ಉಪಾಸನವೂ ಆಗಲಾರದು. ಅವೆರಡೂ ಜ್ಞಾನಿಗೆ ಅಯೋಗ್ಯವು. ಯಾಕೆಂದರೆ ಉಪಾಸನವು ಮಾನಸಕರ್ಮಪರವಾದದ್ದು, ಮತ್ತು ಶಾಸ್ತ್ರದಲ್ಲಿ ಜ್ಞಾನಿಗೆ ಕರ್ಮವು ಹೇಳಲಿಲ್ಲ. ಇದಕ್ಕೆ ಶ್ರುತ್ಯಾಧಾರವು ಕೇಳು, 'ನಕರ್ಮಣಾ ನಪ್ರಜಯಾ, ನಧನೇನ ತ್ಯಾಗೇನೈಕೇನಾಮೃತತ್ವಮಾನಷುಃ'" ಅಂದರೆ, ಶಾಸ್ತ್ರೋಕ್ತ ಕರ್ಮಗಳಿಂದಲೂ, ಪುತ್ರಾದಿಪ್ರಜೆಯಿಂದಲೂ, ದ್ರವ್ಯಸಂಗ್ರಹದಿಂದಲೂ ಅಮೃತತ್ವವು ಸಿಗಲಾರದು, ತ್ಯಾಗ ಒಂದರಿಂದಲೇ ಅದು ಪ್ರಾಪ್ತವು " ಎಂದು ಹೇಳಲು, "ಅದು ತ್ಯಾಗಪರ ಶ್ರುತಿ " ಎಂದು ದಿಕ್ಷಿತನು ಅಂದನು. ಆಗ ಸಿದ್ಧರು,

ಕೇಳಯ್ಯಾ ದೀಕ್ಷಿತನೆ, ಅದರ ಉತ್ತರಾರ್ಧವನ್ನೂ ಶ್ರವಣ ಮಾಡುವವದರಿಂದ ನಿನ್ನ ಸಂಶಯವು ಪೂರ್ಣ ನಿವೃತ್ತಿಯಾಗುವವದು ಶೃತಿಯು "ಜ್ಞಾನದೇವ ತು ಕೈವಲ್ಯಮ್ ನಾನ್ಯಃಹ್ ಪಂಥಾಯನಾಯ ವಿದ್ಯತೆ " ಜ್ಞಾನದಿಂದಲೇ ಕೈವಲ್ಯ ಪ್ರಾಪ್ತಿಯು, ಇದಕ್ಕೆ ಎರಡನೇ ಮಾರ್ಗವಿರುವದಿಲ್ಲ, ಹೀಗಿರುತ್ತದೆ. ಆದ್ದರಿಂದ ಮಹಾವಾಕ್ಯವು ಶೃತಿ ಸಮ್ಮತವಾಗಿ ಜ್ಞಾನಪರವಿರುವದು. ಒಂದು ವೇಳೆ ಅದು ಕರ್ಮಪರವಿದ್ದರೆ, ಅದು ಅಣುಮಾತ್ರವಾದರೂ ಅವಿದ್ಯಾ ನಿವಾರಕವಾಗದು", ಎಂದೂ ಅಂದದ್ದು ಕೇಳಿ ದೀಕ್ಷಿತನು ಸಮಾಧಾನಪಟ್ಟನು.

ಏಳನೇ ದಿವಸ ಪ್ರಾತಃಕಾಲದಲ್ಲಿ ಸಭಾಮಂಟಪಗಳಿಗೆ ಸಿಧ್ಧಮೂರ್ತಿಯು ವಿರಾಜಿಸುತ್ತಿರುವಾಗ, ತಿರ್ಕರಿ ಭಟ್ಟನೆಂಬ ಬ್ರಾಹ್ಮಣನು ಬಂದು ಸಿಧ್ಧರನ್ನು ಕುರಿತು, "ಸ್ವಾಮಿ, ಬ್ರಹ್ಮತ್ಮೈಕ್ಯವೆಂಬ ವಸ್ತು ಯಾವ ಲಕ್ಷಣಗಳಿಂದ ಲಕ್ಷಿಸಲ್ಪಡುವವದು ?" ಎಂದು ಪ್ರಶ್ನೆ ಮಾಡಲು ಸಿದ್ಧರು ಅನ್ನುತ್ತಾರೆ, "ಬ್ರಹ್ಮತ್ಮೈಕ್ಯತ್ವರೂಪನಾದ ಆತ್ಮನು, ಸುಖಮಯ, ನಿತ್ಯ, ಪ್ರಕಾಶ,ವಿಭು, ನಾಮರೂಪಗಳಿಗೆ

ಆಧಾರ, ಬುದ್ಧಿಗೆ ಅಗೋಚರವಿದ್ದು ಬುದ್ಧಿಯನ್ನು ಪ್ರಕಾಶಿಸುವಂಥವನಿದ್ದು, ಶುದ್ಧ, ಅಪಾರ ಮತ್ತು ಮಹಾವಾಕ್ಯದ ಲಕ್ಷಾರ್ಥ ಇವೇ ಮುಂತಾದ ಲಕ್ಷಣಗಳಿಂದ ಲಕ್ಷಿತನಾಗುವನು. "ಸುಖ" ಮಾತ್ರವೆಂದರೆ, ಸುಖವು ಕ್ಷಣಮಾತ್ರವಾದರೂ ವಿಷಯಗಳಲ್ಲಿಯೂ ಇರುವದು; ಎಂದು "ನಿತ್ಯ' ವೆಂಬ ಲಕ್ಷಣವು ಹೇಳಲ್ಪಟ್ಟಿತು. ಆಕಾಶ ದಿಕ್ಕಾಲ ಮನಸ್ಸಾದಿಗಳು ಸಹ ನಿತ್ಯವು ಅಂದರೆ, ಅವು ಪ್ರಕಾಶಕಗಳಲ್ಲವೆಂತ ಆತ್ಮನಿಗೆ ಪ್ರಕಾಶವೆಂಬ ಲಕ್ಷಣವೂ ಕೊಟ್ಟಿತು. ಸೂರ್ಯಚಂದ್ರ, ಅಗ್ನ್ಯಾದಿಗಳು ಪ್ರಕಾಶ ಧರ್ಮಗಳಿದ್ದವುಗಳಾದ್ದರಿಂದ, ಅವುಗಳಿಂದ ವಿಲಕ್ಷಣವೆಂದು ತಿಳಿಸಲಿಕ್ಕೆ ಆತ್ಮನಿಗೆ.ವಿಭುವೆಂಬ ಲಕ್ಷಣವು ಹೇಳಲ್ಪಟ್ಟಿತು. ಇದರಿಂದ ಅತಿ ವ್ಯಾಪ್ತಿ ದೋಷ ಉಂಟಾಗದು. ಆದ್ದರಿಂದ ವಿಷಯಲಕ್ಷಣ

ದೋಷಗಳನ್ನು ನಿವೃತ್ತಿಪಡಿಸಿ, ವಿಷಯಗಳಿಗೆ ಆತ್ಮನು ವಿಲಕ್ಷಣನೆಂದು ತೋರಿಸುವದಕ್ಕೆ ಹೀಗೆ ಬಹು ಲಕ್ಷಣಗಳಿಂದ ವರ್ಣಿಸಲ್ಪಡುವನು ". ಇದನ್ನು ಕೇಳಿ ತೀರ್ಕಂಭಟ್ಟನು, "ಆನಂದವು, ಗುಣವೇನು? " ಎಂದು ಕೇಳಲು, ಸಿದ್ಧಾರೂಢರು,

“ಆನಂದವು ಗುಣವಲ್ಲ. ಯಾಕೆಂದರೆ ಗುಣಗಳಿಗೆ ಆಗಂತುಕತ್ವ (ಬರುವುದು) ನಿರ್ಯಾಣ (ಹೊಗುವದು) ಇರುವದು. ಆದರೆ ಆತ್ಮಪ್ರೇಮವು ಎಂದೂ ವಿಚ್ಛಿನ್ನವಾಗುವುದಿಲ್ಲ”, ಎಂದು ಪ್ರತ್ಯುತ್ತರ ಕೊಟ್ಟರು. ಆಗ ತಿರ್ಕಂಭಟ್ಟನು “ಬುದ್ಧಿಗೆ ಬ್ರಹ್ಮವು ಅವೇದ್ಯವಾದರೆ, ಬ್ರಹ್ಮಾನಂದವು ಅದಕ್ಕೆ ವೇದ್ಯವಾಗಿದೆ, ಅದರ ದುಃಖ ಹ್ಯಾಗೆ ಹೋಗವದು?' ಎಂದು ಕೇಳಲು, ಸದ್ಗುರುಗಳು, “ನೀನು ಹೇಳುವುದು ಅಸಂಸ್ಕೃತ (ಅಶುದ್ಧ) ಬುದ್ಧಿ ವಿಷಯದಲ್ಲಿ ಸತ್ಯವಿದೆ. ಆದರೆ ವೇದಾಂತ ಶ್ರವಣದಿಂದ ಶುದ್ಧವಾದ ಯಾವ ಬುದ್ದಿ ಇರುವದೋ ಅದಕ್ಕೆ ಬ್ರಹ್ಮವು ಸಾಕ್ಷಾತ್ಕಾರವಾಗುವದು. ತ್ವಂಪದ
ಲಕ್ಷಣಗಳನ್ನು ಶೋಧಿಸುವದರಿಂದ ಅಶುದ್ಧ ಬುದ್ದಿಯು ಶುದ್ಧವಾಗುವದು. ಆಮೇಲೆ ಅದು ತತ್ವದ ಲಕ್ಷಣಗಳಿಗೆ ವ್ಯಾಪಿಸುವದರಿಂದ ಅದರ ಆವರಣಗಳೆಲ್ಲಾ ನಾಶವಾಗುವವು.
ಅದೇ ಸಮಕಾಲದಲ್ಲಿ ಆ ಬುದ್ದಿಗೆ
ಬ್ರಹ್ಮಸಾಕ್ಷಾತ್ಕಾರವಾಗುತ್ತದೆ. ಅದರಿಂದ ಅದರ ದುಃಖವು

ನಾಶವಾಗುವದು', ಎಂದು ಉತ್ತರ ಕೊಡಲು, ತಿರ್ಕಂಭಟ್ಟನು ಸಂತೋಷಪಟ್ಟು ಸ್ವಸ್ಥಾನಕ್ಕೆ ತೆರಳಿದನು.

ಎಂಟನೇ ದಿವಸ ಸಿದ್ದ ಅವಧೂತರು, ದೇವಾಲಯದಲ್ಲಿ ಕೂತಿರುವಾಗ, ಒಂದು ಅಯಾಚಿತ ನೈವೇದ್ಯ ಪ್ರಾಪ್ತವಾಗಲು, ಅದನ್ನು ಸೇವಿಸಿ, ಜಲಪ್ರಾಶನ ಮಾಡುತ್ತಿದ್ದರು. ಆಗ ಲೌಕಿಕ ಸಂಸ್ಕಾ ರಿಯಾದ ಗೋವಿಂದಭಟ್ಟನೆಂಬವನು, ಸಿದ್ಧಯೋಗೀಂದ್ರರನ್ನು ಕಂಡು, "ಸಿದ್ದರೇ, ಜ್ಞಾನಿಗಾದರೂ ಕ್ಷುಧಾ ತೃಷಾದಿ ದುಃಖವೃತ್ತಿಗಳು ಬಾಧಿಸುತ್ತವೆ. ಜ್ಞಾನಸ್ಥಿತಿ ಇದ್ದಾಗ್ಯೂ ಪ್ರಾರಬ್ಧ ಭೋಗಗಳು ತ್ರಾಸಕೊಡುತ್ತವೆ. ಹಾಗಾದರೆ ಬ್ರಹ್ಮಾಕಾರ ವೃತ್ತಿಯಾದ ಕೂಡಲೇ ದುಃಖನಿವೃತ್ತಿ ಮತ್ತು ಸುಖಪ್ರಾಪ್ತಿಯೆಂಬ ವಚನವು ನಿಮ್ಮ ಅನುಭವದಿಂದಲೇ ಅಸಂಭವವಾಯಿತಲ್ಲ" ಎಂದು ನುಡಿಯಲು ಸಿದ್ಧರು,"ಎಲೈ ಬ್ರಾಹ್ಮಣನೇ, ಈ ಪ್ರಶ್ನೆಯಿಂದ ಜ್ಞಾನಿಯೆಂದು ಆತ್ಮಚೈತನ್ಯ ಲಕ್ಷಿಸಿ ಹೇಳುತ್ತಿಯೋ, ದೇಹವೇ ಜ್ಞಾನಿಯೆಂದು ನುಡಿಯುವಿಯೋ? ಆತ್ಮ ಚೈತನ್ಯವೆಂದರೆ ಆತ್ಮ ಚೈತನ್ಯಕ್ಕೆ ದುಃಖವಿಲ್ಲ. ಯಾಕೆಂದರೆ ಆತ್ಮನು ಷಡೂರ್ಮಿ

ರಹಿತನು,ಪಂಚಕೋಶ ಮತ್ತು ದೇಹತ್ರಯಗಳಿಗೆ ಅತೀತನು. ದೇಹ ಲಕ್ಷಿಸಿ ಜ್ಞಾನಿಯನ್ನು ವಿಯಾದರೆ, ಆತ್ಮಜ್ಞಾನಿಗೆ ದೇಹ ಧರ್ಮಗಳಿಲ್ಲ. ದೇಹವು ಪ್ರಾರಬ್ಧದ ಆಧೀನವಿದ್ದು, ಚೈತನ್ಯಕ್ಕೆ ಅದರ ಸುಖದುಃಖಗಳು ಹತ್ತಲಾರವು. ದೇಹಧರ್ಮಗಳು ಮೊದಲು ಮುಮುಕ್ಷು ದಶಾ ಬಂದಾಗಲೇ ತಿರಸ್ಕರಿಸಲ್ಪಟ್ಟಿರುತ್ತವೆ, ಆಮೇಲೆ ಆತ್ಮರೂಪದನಾದ ಜ್ಞಾನಿಗೆ ದೇಹಧರ್ಮಗಳಿವೆ. ಎಂದು ಹ್ಯಾಗೆ ಹೇಳುವಿ?" ಎಂದು ಕೇಳಲು, ಗೋವಿಂದ ಭಟ್ಟನು, ನಮ್ರ ಭಾವದಿಂದ ಸಿದ್ಧ ಸದ್ಗುರುಗಳಿಗೆ ನಮಸ್ಕರಿಸಿ, ಅನ್ನುತ್ತಾನೆ, ಮಹಾನುಭಾವರೇ, ದೇಹಾತ್ಮಭಾವವುಳ್ಳ ಲೌಕಿಕರಾದ ನಾವು ಈ ವೇದಾಂತ ಶಾಸ್ತ್ರ ಭಾಷಣವನ್ನು ತಿಳಿಯಲಾರೆವು. ನಿಮ್ಮ ದರ್ಶನದಿಂದಲೇ ನಾನು ಕೃತಕೃತ್ಯನಾದೆನು. ನನಗೆ ವಿಚಾರಶಕ್ತಿಯಿಲ್ಲ " ಎಂದು ನುಡಿದು, ಪುನಃ ದಂಡವತ ನಮಸ್ಕಾರ ಮಾಡಿ, ಗೋವಿಂದಭಟ್ಟನು ಹೊರಟು ಹೋದನು.

ಒಂಭತ್ತನೇ ದಿವಸ ಒಬ್ಬ ಸ್ತ್ರೀಯರು ಸಿದ್ಧರಿದ್ದಲ್ಲಿಗೆ ಬಂಧು ಕೈಜೋಡಿಸಿ, 'ಹೇ ಸ್ವಾಮಿ, ನಾನು ದೀನಳೂ, ಅಜ್ಞಾನಿಯೂ

ಇದ್ದೇನೆ. ಏನು ಮಾಡುವದರಿಂದ ನಾನು ಧನ್ಯಳಾಗುವೆನು ? ಆ ಸುಪಂಥವನ್ನು ನನಗೆ ದಯಮಾಡಿ ತೋರಿಸಿರಿ", ಎಂದು ಕೇಳಲು, ಸಿದ್ಧನಾಥರು, ಆ ಸ್ತ್ರೀಯಳನ್ನು ಕುರಿತು, "ತಾಯಿ ಉಷಃಕಾಲದಲ್ಲಿ ಎದ್ದು, ಯಥಾರೀತಿ ಸ್ನಾನ ಮಾಡಿ, ಆ ಮೇಲೆ ವಿಭೂತಿ, ರುದ್ರಾಕ್ಷಿ ಧಾರಣೆ ಮಾಡಬೇಕು. ಅಂಗನ್ಯಾಸ ಕರನ್ಯಾಸಾದಿಗಳನ್ನು ಮಾಡಿ ಸ್ವಸ್ಥಚಿತ್ತದಿಂದ ಮಾನಸ ಪೂಜೆಯನ್ನು ಗೈದು, ಪಂಚಾಕ್ಷರಿ ಜಪವನ್ನು ಮಾಡತಕ್ಕದ್ದು. ಈ ಪ್ರಕಾರ ನಿತ್ಯದಲ್ಲಿಯೂ ನೀನು ಆಚರಿಸುವದಾದರೆ ನಿಶ್ಚಯವಾಗಿ ಮುಕ್ತಳಾಗುವಿ", ಎಂದು ಅಂದದ್ದು ಕೇಳಿ, ಆಕೆಯು ಸಂತುಷ್ಟನಾಗಿ ಸದ್ಗುರುಗಳಿಗೆ ನಮನ ಮಾಡಿ ಹೊರಟು ಹೋದಳು. ಈ ಪ್ರಕಾರ ಸಿದ್ಧಾರೂಢರು ಅಲ್ಲಿ ಒಂಭತ್ತು ದಿವಸ ಸತ್ಪುರುಷರ ಸಂಗತಿಯಲ್ಲಿ ಕಳೆದು, ಅಲ್ಲಿಂದ ಮುಂದೆ ತೀರ್ಥಾಟಣಕ್ಕೆ ಹೊರಟರು. ಹೋಗುವಾಗ್ಗೆ ಆ ಗ್ರಾಮದ ಜನರೆಲ್ಲರೂ ಸಿದ್ಧರನ್ನು ಉತ್ಸಾಹದಿಂದ ಗ್ರಾಮೋಲ್ಲಂಘನೆ ಮಾಡಿಸಿ ಹಿಂತಿರುಗಿದರು. ಸಿದ್ಧರು ಭೋಟಾ ನಾರಾಯಣನ ದರ್ಶನವನ್ನು ತಕ್ಕೊಂಡು, ಮಹಾದೇವ

ಅಧಿಷ್ಠಾನವಾದ ಸುಂದರ ದೇವಾಲಯವನ್ನು ಕಂಡು, ಮುಂದೆ ಠಸ್ಕರಾ ಮಸ್ಕರಾ ಸ್ಥಾನಗಳನ್ನು ನೋಡಿದರು. ತಿರುವಟಾರದಲ್ಲಿ ಕೃಷ್ಣಮೂರ್ತಿಯನ್ನೂ ಪದ್ಮನಾಭಪುರದಲ್ಲಿ ಅನಂತಶಾಯಿಯನ್ನೂ ಪೂಜಿಸಿದರು. ಅಲ್ಲಿ ಬ್ರಾಹ್ಮಣ ಭೋಜನ ನಡೆದಿರುವಾಗ,ಸಿದ್ಧರು ಅವರ ನಡುವೆ ಹೋಗಿ ಕೂಡ್ರಲು, ನಾಲ್ಕು ಮಂದಿ ಬ್ರಾಹ್ಮಣರು ಮಹಾತ್ಮರ ಹತ್ತಿರ ಬಂದು, “ ಎಲೋ ನಿನ್ನ ದೇಹದಲ್ಲಿ ಶೂದ್ರ ಚಿನ್ಹೆಗಳು ಕಾಣಿಸುತ್ತವೆ. ನೀನು ಹ್ಯಾಗೆ ಬ್ರಾಹ್ಮಣ ಪಂಕ್ತಿಯಲ್ಲಿ ಬಂದು ಕೂತಿರುವಿ';ಎಂದು ಕೇಳಲು ಸಿದ್ಧಾರೂಢರು, "ನಿಮಗೆ ಬ್ರಹ್ಮಚಿನ್ಹಗಳು ಕಾಣಿಸುವದಿಲ್ಲ "ಎಂದು ಅಂದದ್ದಕ್ಕೆ ಅವರು " ನೀನು ಬ್ರಾಹ್ಮಣ ಇದ್ದಿಯೆಂದರೆ ನಿನ್ನ ಶಿಖಾ ಸೂತ್ರಗಳಲ್ಲಿ ?” ಎಂದು ಕೇಳಿದರು. ಆಗ ಸಿದ್ಧ ಅವಧೂತರು ಆ ಕರ್ಮಠರಿಗೆ ಶ್ರುತ್ಯುಕ್ತಿ ಹೇಳಿದ್ದೇನೆಂದರೆ "ಅಶಿಖಾ ಅಯಜ್ಞೋಪವೀತ ಯತಿಕ್ಯಾದೃಚ್ಚಿಕೋಭವೇತ್ ", ಅಂದರೆ ಶಿಖಾ ಯಜ್ಞೋಪವೀತ ಗಳಿಲ್ಲದೆ ಯತಿಯು ಇಚ್ಛಾರಹಿತನಾಗಿರತಕ್ಕದ್ದು" ಎಂದು ನುಡಿಯಲು, ಆ

ಬ್ರಾಹ್ಮಣರು ಎಲೋ ಯತಿ ಚಿನ್ಹಗಳಾದ ದಂಡಾದಿಗಳಾದರೂ ಕಾಣಿಸುವದಿಲ್ಲವಲ್ಲ ಎಂದು ಅಂದಿದ್ದಕ್ಕೆ ಅವಧೂತರು "ಜ್ಞಾನವೇ ನಮ್ಮ ದಂಡವು, ಸಮತೆಯೇ ಕಂಥೆ, ವೈರಾಗ್ಯವು ಭಸ್ಮಘುಟಿಕೆಯು ಮತ್ತು ತತ್ವವಿವೇಚನೆಯೇ ನಮ್ಮ ಕಮಂಡಲ" ಎಂದು ಉತ್ತರ ಕೊಡಲು, ಆ ಬ್ರಾಹ್ಮಣರು ಚಕಿತರಾಗಿ, ಈತನು ಬ್ರಹ್ಮ ಜ್ಞಾನಿ ಇರುವನು. ಈತನಿಗೆ ಅವಶ್ಯವಾಗಿ ಭೋಜನವನ್ನು ನೀಡಬೇಕು", ಎಂದು ಅಂದುಕೊಂಡರು. ಯಾಕೆಂದರೆ ಅತಿಥಿಯು ವೈಶ್ವಾನರ ರೂಪದಿಂದಿರುವನು. ಅವನನ್ನು ತೃಪ್ತಿ ಪಡಿಸುವದರಿಂದ ಗೃಹಸ್ಥನಿಗೆ ಸರ್ವ ಕಾಮಾಪ್ತಿಯು, ಅತಿಥಿಯನ್ನು ಹೊರಡಿಸಿದರೆ ಸರ್ವ ಸಂಪತ್ತಿಯನ್ನು ಆತನು ಸುಟ್ಟು ಬಿಡುವನು. ಭೋಜನವನ್ನು ತೀರಿಸಿ, ಸಿದ್ಧನಾಥರು ಜನಾರ್ಧನ ಕ್ಷೇತ್ರಕ್ಕೆ ಹೋಗಿ ಪರ್ವತಾಗ್ರದಲ್ಲಿ ಸ್ವಾಮಿಯ ಅಚಮನ ಮುದ್ರೆಯನ್ನು ಕಂಡರು. ಜ್ಞಾನಿಗೆ ಸರ್ವ ಜಗತ್ತು ಚುಲಕಪ್ರಾಯವೆಂದು ತಿಳಿದು, ಅಲ್ಲಿಂದ ಹೊರಟು ಸಿದ್ಧರು ಶ್ರೀಕೃಷ್ಣನಾಥನ ದರ್ಶನದ್ದೇಶೆಯಿಂದ ಉಡುಪಿ ಕ್ಷೇತ್ರಕ್ಕೆ

ಹೋದರು. ಅಲ್ಲಿ ಕೃಷ್ಣಮೂರ್ತಿಯನ್ನು ಕಂಡು, ಈತನು ಬ್ರಹ್ಮರೂಪಿ ಕ್ಷೇತ್ರಜ್ಞನು, ಸರ್ವಕ್ಷೇತ್ರಗಳಲ್ಲಿ ವ್ಯಾಪಿಸಿರುವನು. ಸೃಷ್ಟಿ ಜ್ಞಾನವನ್ನೆಲ್ಲ ಆಕರ್ಷಣ ಮಾಡುತ್ತಾನಾದ್ದರಿಂದ ಈತನಿಗೆ ಕೃಷ್ಣನೆಂದು ಹೆಸರು. ಹೀಗಂದುಕೊಂಡು, ಸಿದ್ಧಯತಿಗಳು ಕ್ಷಣ ಮಾತ್ರ ಸಮಾಧಿಯಲ್ಲಿದ್ದು ಆಮೇಲೆ ಎದ್ದು ಮುಂದಕ್ಕೆ ನಡೆದರು. ಎಂಬಲ್ಲಿಗೆ

ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣ ಮಾತ್ರದಿಂದ ಸರ್ವ ಪಾಪಗಳನ್ನು ನಾಶಮಾಡುವ ಈ ಆರನೇ ಅಧ್ಯಯವನ್ನು ಶಿವದಾಸನು ಶ್ರೀ ಸಿದ್ಧಾರೂಢ ಸದ್ಗುರುಗಳ ಚರಣಾರವಿಂದಗಳಲ್ಲಿ ಅರ್ಪಿಸಿರುವನು.